'ಈ ಮನೇಲ್ಲಿ... ಎಷ್ಟು ಕಾಲಾಂತ ಪಾಪ ಅವು...'

'ಅವ್ರೂಂದ್ರೆ...?'

'ನಿಮ್ಮಗ ಪ್ರೊಫೆಸರ್... ಅವ್ನ ಹೆಂಡ್ತಿ ನಿಮ್ ಮುದ್ದಿನ ಸೊಸೆ...'

ಬಾಬುರಾಯರಿಗೆ ತಣ್ಣೀರಲ್ಲಿ ತಪಕ್ಕನೆ ಮುಳುಗಿಸಿದಂತಾಯ್ತು. ನಿಟ್ಟುಸಿರಿಟ್ಟು.

'ನಂಗೆಲ್ಲ ಸಮ ಅರ್ಥ ಆಗ್ತದೆ ಮಾರಾಯ್ತಿ... ನಾವು ಬೇರೆ ಮನೇಂತಾ ಮಾಡ್ತಂದ್ರೆ ಜೀವ್ನಕ್ಕೆ ದಾರಿ ಎಲ್ಲಿದೆ? ಬ್ಯಾಂಕ್ನಿಂದ ಸಿಗೋ ಬಡ್ಡಿ ಹಣ ಹೊಟ್ಟೆಗೇ ರಾಮ್ರಾಮ ಅಂತಾಗ್ತದೆ. ನಿಂಗೊತ್ತಲ್ಲ... ನಮ್ಮಿಬ್ರ ಔಷಧಿ ಖರ್ಚಿಗೆ ಕಮ್ಮಿಬಿದ್ರೆ ಯಾರ್ಹತ್ರ ಬೇಡ್ಲಿಕ್ಕೆ ಹೋಗೋಣ!? ಆಯ್ತು. ಈ ಹಳೆ ಮನೆ ಮಾರ್ಬ್ಹಾಕಿ ಮಗ್ಳು ರಜನಿ ಮನೆಗೆ ಪೂನಾಕ್ಕೆ ಹೋಗಿರೋಣಾಂದ್ರೆ. ಅಳಿಯ ಮಹಾಶಯ ಚಂಡ ಪ್ರಚಂಡ ಸುಧೀರ ಪರ್ಮಿಷನ್ ಕೊಡಲ್ಲಾ ನಂಗೊತ್ತು. ಇಲ್ಲಿ ನಮ್ದೇ ಜಾಗ ನಮ್ದೇ ಮನೆ... ಹಳೇದು ಹೌದು. ಆದ್ರೆ ಸೊಸೆ ತುಂಬಾ ಮಾಡರ್ನ್, ಎಜುಕೇಟೆಡ್, ಫ್ಯಾಷನೆಬಲ್, ನೋಡ್ಲಿಕ್ಕೆ ಡೀಸೆಂಟು... ಮುಟ್ಟಿದ್ರೆ ಕರೆಂಟು... ಸ್ಮಾರ್ಟ್, ಫ್ರೆಂಡ್ಲಿ... ಯಾರಿಗೆ? ಗಂಡಂಗೆ ಮಗ್ಳಿಗೆ ಫ್ರೆಂಡ್ಸಿಗೆ... ನಮ್ಗಲ್ಲಾ ಕಣೆ ಭವಾನಿ... ಹೇ... ಹ್ಹೇ... ಹ್ಹೇ...' ನಮ್ಗೆ ವಯಸ್ಸಾತು... ಆಯುಷ್ಯ ತೀರಿಲ್ಲ... ಸದ್ಯ 'ತೀರೋ' ಹಾಂಗೂ ಕಾಣಲ್ಲಾ... ಒಟ್ನೇ ಮಗಾಂತ.'

ಮುಂದಾಡಲಾಗದಷ್ಟು ಭಾವಪೂರ ದಿಗ್ಗನೆದ್ದಿದೆ. ಈಗ ಗಂಡಂಗೆ ಸಮಾಧಾನಿಸೋದು ಭವಾನಿಯ ಪಾಲಾಯ್ತೆಂಬಂತೆ, ಕ್ಷೀಣ ಸ್ವರದಲ್ಲಿ.

'ಹೋಗ್ಲಿ ಬಿಡಿ... ಮನೇಲ್ಲಿ ಹಿರೇವ್ರಾಗಿ ನೀವ್ ಕಣ್ಣೀರ್ ಹಾಕ್ಬಾರ್ದು. ಏನೋ ಹಾಳಾದ್ದು ನೆನ್ಪಾತು ಹೇಳ್ದೆ. 'ಪಾಲಿಗೆ ಬಂದಿದ್ದು ಪಂಚಾಮೃತ' ಅನ್ನೋಬೇಕು ಅನ್ನೋ ಅಂತರಾರ್ಥದ ಭವಾನಿಯ ಮಾತಿಗೆ ಆ ಮೌನಕ್ಷಣ ಹೌದಪ್ಪಾಂದಿತು. ಏನಾದರೂ ಉಮೇದಲ್ಲಿ ಭವಾನಿ, ಪ್ರಶ್ನಿಸಿದರೆ ಮಾಲತಿಯ 'ಹ್ಞಾಂ... ಹೂಂ... ಉಹುಂ..!' ಇಷ್ಟೇ. ಈಗೀಗ ಅದಕ್ಕೆ 'ನಂಗೊತ್ತಿಲ್ಲ' ಅನ್ನೋ ನೆಗೆಟೀವ್ ಶಬ್ದಾನೂ ಪೋಣಿಸಿದ್ದಾಳೆ.

ಅವತ್ತು ಶನಿವಾರ. ಕಾಲೇಜಿಗೆ ರಜೆ ಇರಬೇಕು. ಸುಧಾಕರ ಮನೇಲ್ಲಿದ್ದ, ಜ್ಯೋತಿ ಜೊತೆ ಹರಟುತ್ತಲಿದ್ದ. ಅಮ್ಮ ಏನೋ ಬಿಡುವಲ್ಲಿ ಅಪ್ಪನ ಬಳಿ ಕುಳಿತಿದ್ದು ಕಂಡನಿರಬೇಕು; ನಿಧಾನ ಬಂದು ತಾನು ಎದುರಿನ ಕುರ್ಚಿಯಲ್ಲಿ ಕುಳಿತಿದ್ದೇ, ಮಂದಸ್ವರದಲ್ಲಿ,

'ಅಪ್ಪಾ... ಒಂದ್ಮಾತು ಹೇಳ್ಬೇಕೂಂತಾ...'

'ಹೇಳು ಸುಧಾಕರ... ಅದ್ರಲ್ಲೇನು?'

'ಸ್ಟ್ರೇಟ್ ವೇ ಹೇಳ್ತಿದೀನಲ್ಲಾಂತ... ಮತ್ತೆ ಅಂದ್ಕೋಬ್ಯಾಡಾ!'

ಬಾಬುರಾಯರು ಮೌನದಲ್ಲಿ ಹೇಳೆಂಬಂತೆ ಕೈ ಬೆರಳಿಂದ ಸನ್ನೆ ಮಾಡಿದ್ದಾತು. ಭವಾನಿಗೂ ಕುತೂಹಲವಾಯ್ತು. ಸುಧಾಕರನೇ.

'ಮಾಲತಿ... ಈ ಹಳೇ ಮನೇಲ್ಲಿ ತಾನಿರಲ್ಲಾ ಅನ್ತಿದಾಳೆ... ಧೂಳು, ಕಸ ಕಡ್ಡಿ, ದರಗೆಲೆ, ಜಿರಳೆ ರಾಶಿ... ಹಂಗ್ಮಾಡಿ ನಂಗೇನ್ ಅನ್ನಿಸ್ತದೇಂದ್ರೆ ನೀನ್ ಈ ಮನೆ ಮಾರ್ಬ್ಹಾಕಿ...'

'ಮಾರ್ಬ್ಹಾಕಿ...!?'

'ನಾನ್ ಬೇರೆ ಮನೆಗ್ಹೋಗ್ಬೇಕೂಂತಾ ತೀರ್ಮಾನ ಮಾಡಿದೀನಿ!...'

'ಕಡೆಗೆ ನನ್ನು ನಿನ್ನಾಯಿ... ಅವಸ್ಥೆ!?'

'ನೀವೂ ಇಲ್ಲೇ ನೆಲ್ಲೆಕೇರಿಲ್ಲೋ ಎಲ್ಲೋ ಛಲೋ ಸಣ್ಣ ಮನೆ ಬಾಡಿಗೆಗೆ ತಕ್ಕೊಂಡ್ ಸುಖವಾಗಿ ಇದ್ದುಬಿಡಿ!... ಬ್ಯಾಡಾಂದ್ರೆ... ರಜನಿ ಮನೆಗಾದ್ರೂ ಹೋಗ್ತಿರ್ಬಹ್ದು!'

'ಇಲ್ದಿದ್ರೆ ಯಾವ್ದಾದ್ರೂ ಅನಾಥಾಶ್ರಮಕ್ಕಾದ್ರೂ ಹೋಗಿರ್ಬಹ್ದು!'

—ಚುಚ್ಚಿದಂತಿನ ತಂದೆಯ ವಾಗ್ಬಾಣಕ್ಕೆ ಸುಧಾಕರ ಕಿಂಚಿತ್ತೂ ಮಿಸುಕಾಡಲಿಲ್ಲ. ಆ ಕ್ಷಣವೇ.

'ಅದು ನಿಮ್ಮಿಷ್ಟ!'

—ಅಂದು ಬಿಡಬೇಕೇ!? ಅಂದೇ ಬಿಟ್ಟ. ಭವಾನಿ ಆ ಮಾತಿಗೆ ಘಸಕ್ಕನೆ.

'ಅಲ್ಲಾ ಸುಧಾಕರ.... ಈ ಮನೆ ನಮ್ದು ಸ್ವಂತದ್ದು, ನಾವ್ಯಾಕೆ ಮಾರ್ಬೇಕೂಂತಾ...?'

'ಈ ಆಸ್ತೀಲಿ ನಂಗೆ ಪಾಲು ಬೇಕಮ್ಮಾ... ಮುಚ್ಚು ಮರೆ ಏನಿಲ್ಲಾ... ನಂಗೆ ದುಡ್ಡು ಬೇಕು... ಹೊಸ ಮನೆ ಕಟ್ಟಿಸ್ಬೇಕು! ಎಲ್ಲಾ ಪ್ಲಾನ್ ರೆಡಿಯಾಗಿದೆ!'

ಕಣ್ಣೊರೆಸಿಕೊಂಡ ಭವಾನಿಗೆ ಭಾವಪ್ರವಾಹ ಹರಿದಿತ್ತು. ಅದೇ ಆವೇಶದನೇಲ್ಲಿ, 'ಓ! ಹಾಂಗಾ... ಈ ಮನೆ ಮಾರ್ಬ್ಹಾಕಿ ನಿಂಗೆ ದುಡ್ಡು ಕೊಟ್ಟು ನಾವಿಬ್ರು ಬೇರೆ ಮನೆ ಮಾಡ್ಕೊಂಡ್ ನಿಮ್ಮಿಂದ ದೂರ ಇರ್ಬೇಕು... ಬಾಡಿಗೆ ಮನೇಲ್ಲಿ... ಎಂಥಾ ಮನೆ ಮುರುಕ ಯೋಚ್ನೆನಪ್ಪಾ ನಿನ್ದು.... ವಾಹ್! ಮೆಚ್ಚಬೇಕು!'

'ಅಂದ್ರೆ ಏನೂಂತಾ ಅನ್ತಿದೀಯಾ... ನಿಮ್ ಕಾಲ್ಬುಡದಲ್ಲೇ ಈ ಹಳೇ ಮನೇಲ್ಲಿ ಸಾಯೋ ತನ್ಕ!?' ಅಂದಾಕ್ಷಣ ಬಾಬುರಾಯರು ಇಷ್ಟೊತ್ತು ಥಣ್ಣಗಿದ್ದೋರು ಉದ್ರಿಕ್ತ ಸ್ವರದಿಂದ್ಲೇ. 'ಇಲ್ಲಿ ಕೇಳು... ಈ ಆಸ್ತಿ ಪಿತ್ರಾರ್ಜಿತದ್ದು ಖರೆ... ಆದ್ರೆ ನೀನೂ ಕಾಲೇಜ್ನಲ್ಲಿ ದುಡಿತಿದೀಯಲ್ಲಾ ಇಷ್ಟು ವರ್ಷ ನಮ್ಗೇಂತಾ ಎಷ್ಟು ಲಕ್ಷ ಕೊಟ್ಟಿದೀಯಪ್ಪಾ!?' – ಈ ಅಪ್ಪನ ಪ್ರಶ್ನೆ ಸುಧಾಕರನಿಗೆ ರೊಚ್ಚಿ ಗೆಬ್ಬಿಸಿ ಬಿಡ್ತು. ಆ ಕಡೇಂದ ಮಾಲತಿ ಕಿಟಕಿ ಮೂಲಕ ಈ ದೃಶ್ಯ ನೋಡು ತ್ತಿದ್ದರೂ ಮಧ್ಯೆ ಬರ್ಬೇಡಾಂತ ಸೂಚಿಸಿದ್ದ ಗಂಡಾಂತ ಕಾಣ್ತರ; ತೆಪ್ಪಗೆ ಮೂಕ ಪ್ರೇಕ್ಷಕಿಯಾಗಿ ನಿಂತಿದ್ದಾಳೆ.

'ನಂಗೆ ಸ್ಕಾಲರ್‌ಷಿಪ್ ಲೋನ್... ಹೆಲ್ಪೆಂತಾ ಹಣ ಸಿಗ್ತಿತ್ತಲ್ಲಾ ಅದೆಲ್ಲ ಏನ್ ನೀನ್ ದುಡಿದಿದ್ದಾ!?... ಮದ್ವೆಗೇಂತಾ ಖರ್ಚ್‌ನಲ್ಲಿ.... ನಿನ್ದು ಏನ್ಮಹಾ ಬಿತ್ತಪ್ಪಾ!?.... ಅಡಿಕೆ ಮಂಡೀಲ್ಲಿ ಅಕೌಂಟೆಂಟ್ ಆಗಿದ್ದ ನೀನ್ ಏನ್ತಾನೆ ಕೊಡ್ತಿಯಾ!? ಹ್ಹ್.... ಹೇಳ್ಲಿಕ್ಕೆ ಹೋದ್ರೆ...! ....ಆತು.... ಮನೆ ಮಾರಿ ದುಡ್ಡು ಕೊಡ್ತಿಯೋ...?'

'ಇಲ್ಲಾಂದ್ರೆ!?'; ಅಂದಿದ್ದೇ ಭವಾನಿ ಬ್ರೇಕ್ ಹಾಕಲೆತ್ನಿಸಿದರೆ ಆ ಸುಧಾಕರ ಅಮ್ಮನನ್ನೇ ಕ್ಷಣಾರ್ಧ ದುರುಗುಟ್ಟಿ ನೋಡುತ್ತ, 'ಓಹ್, ಹಾಂಗಿದ್ರೆ... ಆ ಸೆಟ್ಲ್‌ಮೆಂಟ್ ಕೋರ್ಟ್‌ನಲ್ಲಾಗ್ಲಿ.... ನೋಡ್ತೀನಿ... ನೀನ್ ಏನ್ಬೇಕಾರಾ ಮಾಡ್ಕೊಳ್ಳಿ ತಿಂಗ್ಳೊಳ್ಗೆ ಇತ್ಯರ್ಥ ಆಗ್ಲೇಬೇಕು!' ಅಂದಿದ್ದೇ ಈ ದೃಶ್ಯಾನೇ ನೋಡುತ್ತಿದ್ದ ಜ್ಯೋತಿಯ ಕೈ ಧಸಕ್ಕನೆ ಹಿಡಿದು ಆಚೆ ನಡೆದಾಗ ಬಾಬು ರಾಯರಿಗೆ ತಾವಾಡಬೇಕೆಂದಿದ್ದ ಶಬ್ದಗಳೆಲ್ಲ ಗಾಳಿಯಲ್ಲಿ ಭುರ್ರಾದವು.

ರಾತ್ರಿ ನಿದ್ರೆಗೆಟ್ಟಂತೆ ಭವಾನಿ ಚರ್ಚಿಸಿದ್ದೇ ಮುಂಜಾವಿನ ಹೊತ್ತಿಗೆ ತೀರ್ಪು; ಬಾಬುರಾವ್‌ರು ಮನ ಮಾರ್ಬ್ಹಾಕಿ ಅಸ್ತಿಟ್ಟೆ ಪೂರೈಸ್ತೀನಿ ಭವಾನಿ... ಆಗೋದಾಗ್ಹೋಗ್ಲಿ!' ಎಂತಾ!. ಮನೆ ಪಾಲು ಮಾಡಿ ಹಣಕ್ಕಾಗಿ ಒತ್ತಾಯಿಸಿದ್ದು ಮಾಲತಿ ಸೊಸೆಯ ಹುನ್ನಾರದಿಂದಲೇ ಅಂತಾ ಬಾಬು ರಾಯರಿಗೆ ಭವಾನಿ ಗುಸುಗುಟ್ಟಿದ್ದು ಪಕ್ಕಾ ಹೌದೆನ್ನಿಸಿತು. ಲಾಯರ್ರು, ಪೊಲೀಸ್, ಕೋರ್ಟು ಅಂದ್ರ ಕುಮ್ಟೆ ಊರ್ನಲ್ಲಿ ನಮ್ ಗೌರವ ಅಘನಾಶನಿ ಹೊಳೆಲ್ಲಿ ತೊಳೆದ್ಹೋದ್ಹಂಗೆ ಆಗ್ತದೆ ಅನ್ನೋ ಒಂದೇ ಭೀತಿಗೆ ಬಾಬು ಬಾಬಣ್ಣಿ ಬಾಬುರಾವ್‌ರು 'ಶುಭೋದಯ' ಮನೆ ಮರ ಹಿತ್ತೀಲೂಂತಾ 14 ಗಂಟೆಯ ಪೂರಾ ಆಸ್ತಿಯನ್ನು ಸಾಮಿಲ್ ಓನರ್ ನರಸಿಂಹ ಕಮ್ತಿಯವರಿಗೆ ಕುರಿತ ಬೈಠಕ್‌ಗೆ ಅನ್ನುವಂತೆ ಮಾರಿದ್ದಾಯ್ತು! ಕ್ರಯಪತ್ರಕ್ಕೆ ಮಕ್ಕಳ ಸಹಿ ತಮ್ಮ ತಕರಾರಿಲ್ಲಾಂತ ಹೇಳಿಕೆಗೆ ರಜನಿ ಸುಧಾಕರರ ಸಹಿ ಬೇಕೂಂತ ಕಮ್ತೀವು ಒತ್ತಾಯ್ಸಿದ್ದರಲ್ಲ; ಪುಣೇಂದ್ರ 'ರಜನಿ ಗಂಡ ಮಕ್ಕಳೊಡನೆ ಬಂದು ಹಾಜರಾಗಿದ್ದಳು.' ಸಿಕ್ಕ ಮೂವತ್ತೇಳು ಲಕ್ಷದಲ್ಲಿ ಬಾಬುರಾಯರು ಮಗ ಮಗಳಿಗೆ ತಲಾ ಹನ್ನೆರಡು ಲಕ್ಷ ಕೊಟ್ಟು ಅಷ್ಟೇ ತಮ್ಮ ಪಾಲು ಬ್ಯಾಂಕ್ನಲ್ಲಿಟ್ಟು ಬಂದಾಗ ಭವಾನಿ ಕಂಬನಿ ಮಿಡಿಸಿದ್ದು ನೋಡೆ ಇಲ್ಲ.

ಈಗ ಬಾಬುರಾಯ್ರು ಭವಾನಿ ಜತೆ ಹೊಸಹೆರವಟ್ಟಾದ ಆ ಕೊಂಕಣ ರೈಲ್ವೆ ಸೇತುವೆಯಿಂದಾಚೆ ಫರ್ಲಾಂಗ್ ದೂರದಲ್ಲಿ ಎಡಸಾಲಿನ ಮನೇಲ್ಲಿ ಒಂದನ್ನು ಬಾಡಿಗೆಗೆ ಹಿಡಿದಿದ್ದಾರೆ. ತಮಾಷೆ ಎಂಬಂತೆ ತಂಗಿ ರಜನಿಗೆ ನಗುಮುಖದಲ್ಲಿ ಪುಸಲಾಯ್ಸಿ ಸುಧಾಕರ ಐದು ಲಕ್ಷ ಸಾಲ ಪಡೆದು ಗತ್ತಿನಲ್ಲಿ ಪತ್ರ ಬರೆದು ಕೊಟ್ಟಿದ್ದಾನೆ. ಭವಾನಿಗೆ! ಈ ಸಿಹಿನೋ ಕಹಿನೋ ಸುದ್ದಿ ಭವಾನಿಗೂ ಒಪ್ಪಿಸಿಯೇ ನಡೆದಿದೆ... ಮತ್ತೊಂದು ತಮಾಷೆಯದೇ. ಕಥೇಂದರೆ ಸುಧಾಕರ ಬಸ್ತಿ ಪೇಟೆಯಲ್ಲಿ 60X40ರ ಜಾಗ ಖರೀದಿಸಿ ಮನೆ ಕಟ್ಟಿಸಿದ್ದಾನೆ! ಅನ್ನೋದು ಸಿಹಿ ಸಂಗ್ತಿ ಕುಮ್ಟೆ ಊರಲ್ಲಿ ಅಷ್ಟುದಿನ ಪ್ರತಿಷ್ಠೆಯ ವಿಷಯ ಆಗ್ಹೋಯ್ತು.

ಅವತ್ತು ಭಾನುವಾರ ಗೃಹಪ್ರವೇಶ. ಸುಧಾಕರನ ಹೊಸ ಮನೆಯದು. ಬಾಬುರಾಯರು ಭವಾನಿ ಇದೇ ಪ್ರಥಮ... ಇವತ್ತೇ ಅಂತಿಮ ಎಂಬಷ್ಟು ನಿರ್ಧಾರಭಾವನೇಲ್ಲಿ ಅಲ್ಲಿ ಆ 'ಜ್ಯೋತಿ' ಮನಗ್ಹೋಗಿ ಹಾಜರಾಗಿ ಬಂದರೂಂತಾಯ್ತು. 'ಮನೆ ಛಲೋದಾಗಿ ಕಟ್ಸೀದಾನೆ!'; ಭವಾನಿ ಉದ್ಗರಿಸಿ ದಾಕ್ಷಣ 'ನನ್ನನೆ ಮಾರಿದ್ದು ದುಡ್ಡು ಸಿಕ್ತಲ್ಲಾ... ಹಾಂಗ್ಮಾಡಿ', ಉಹುಂ, ಗಂಡನ ಟೀಕಾಸ್ತ್ರ ಭವಾನಿಗೆ ಹಿಡಿಸದು. 'ಅವ್ನು ಪಾಪ ಏನ್ಮಾಡ್ತಾನೆ.... ಎಲ್ಲ ಆಡಳಿತ ತನ್ನ ಕೈಯಲ್ಲಿಟ್ಕೊಂಡ್ ಕುಣಿಸ್ತಿದಾಳಲ್ಲ.... ಆ ಕುಮ್ಮಣಗಿತ್ತಿ. ಅವ್ನು ಹಾಕಿದ ಗೆರೆ ದಾಟೋ ಧೈರ್ಯ ಇನ್ನೀ ಜನ್ಮದಾಗ ಇವ್ನಿಗಿಲ್ಲ ಬಿಡಿ ಪಾಪ...!';

